ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

# ಕಾವಡಿ ಸೇವೆ

"ವೃಕ್ಷೇಭ್ಯೋ ಹರಿಕೇಶಭ್ಯಃ ಪಶೂನಾಂ ಪತಿಃ".

ಜೀವ ಜಂತುಗಳನ್ನೆಲ್ಲ ಪೋಷಿಸಲು, ಪ್ರಕೃತಿಯಾಗಿ ಪಂಚಭೂತಗಳನ್ನು ಸಮಪ್ರಮಾಣದಲ್ಲಿ ಬೆರೆಸಿ, ಕವಚದಂತೆ ಹಸಿರುಡಿಗೆಯುಟ್ಟ, ಪೊರೆಯುತ್ತಿರುವ ಪರಮೇಶ್ವರ. ಭೂಮರೂಪದಿಂದ ಭೂಮ್ಯಾಕಾಶವನ್ನೆಲ್ಲಾ ಆವರಿಸಿರುವ ಧ್ಯಾನಾಸಕ್ತ ಮಹಾದೇವನ ಪುತ್ರೋತ್ಸವ.

" ಶಿವ – ಶುದ್ಧ ಚೈತನ್ಯ, ಆನಂದ – ಸುಬ್ರಹ್ಮಣ್ಯ! "

ಶಿವನಂತೆಯೇ ಅವನ ಪುತ್ರನೂ ಊರ್ಧ್ವಗಾಮಿ, ಅಂತರ್ಯಾಮಿ, ಜೀವಿಗಳನ್ನು ಪೊರೆಯಲು ತಪೋಗಾಮಿ. ಆಜ್ಞಾ, ವಿಶುದ್ಧ, ಅನಾಹತ, ಸ್ವಾಧಿಷ್ಠಾನ, ಮಣಿಪೂರ, ಮೂಲಾಧಾರ ಎಂಬೋ ಷಟ್ಚಕ್ರಗಳ ತತ್ತ್ವಗಳನ್ನು ದಾಟಿ, ರುದ್ರ, ವಿಷ್ಣು, ಬ್ರಹ್ಮ ಗ್ರಂಥಿತ್ರಯಗಳನ್ನು ಭೇಧಿಸಿದ ನಂತರ ಸಹಸ್ರದಳ ಸರಸಿಜದಲ್ಲಿರುವ ಸಹಸ್ರ ಶೀರ್ಷ, ಸಹಸ್ರಾಕ್ಷ, ಸಹಸ್ರ ಪಾದಗಳುಳ್ಳ ದಿವ್ಯ ಚೈತನ್ಯದ ಅನುಭೂತಿ. ಕುಂಡಲಾಕಾರವಾಗಿ ಸುಪ್ತವಾಗಿದ್ದ ಕುಂಡಲಿನೀ ಜಾಗೃತವಾಗಿ ಮೇಲ್ಮುಖವಾಗಿ ಸಹಸ್ರಾರದವರೆಗೆ ಸರ್ಪದಂತೆ ಈ ಆರು ಚಕ್ರಗಳಲ್ಲಿ ಚಲಿಸುವ ಶಕ್ತಿಯೇ ಷಟ್ಕೋನ ಮಧ್ಯನಿಲಯ ಶ್ರೀ ಸುಬ್ರಹ್ಮಣ್ಯೇಶ್ವರ.

ಸುಬ್ರಹ್ಮಣ್ಯಾಯ ದೇವಾಯ ಸ್ಕಂದಾಯ ಪರಮಾತ್ಮನೇ।
ಕುಂಡಲೀ ಸತ್ ಸ್ವರೂಪಾಯ ವಲ್ಲೀಶಾಯ ನಮೋ ನಮಃ॥

ಶ್ರೀ ಶುಭಕೃತ್ ನಾಮ ಸಂವತ್ಸರದ ದಕ್ಷಿಣಾಯನ ಹೇಮಂತ ಋತು, ಮಾರ್ಗಶಿರ ಶುದ್ಧ ಷಷ್ಠಿ, ಮಂಗಳವಾರ. ಮಂಗಳವಾರ ಷಷ್ಠಿ ಅತ್ಯದ್ಭುತ. ಸುಬ್ರಹ್ಮಣ್ಯನಿಗೆ ಪ್ರೀತಿಪಾತ್ರವಾದ ದಿನ. ಹಿಮಾಚ್ಛಾದಿತ ಮುಂಜಾನೆ.

ಕಾರ್ತಿಕೇಯನಿಗೆ ಕಾವಡಿ ಸೇವೆ.

ಇಡುಂಬನ್ ಗೆ ಸುಬ್ರಹ್ಮಣ್ಯನ ಅನುಗ್ರಹ ಸಿದ್ಧಿಸುವಂತೆ ಮಾಡಿದ ಅಪೂರ್ವ ಸೇವೆ, ಕಾವಡಿ ಸೇವೆ.

ಪಳನಿಯಲ್ಲಿ ಜನ್ಮತಾಳಿದ ಕಾವಡಿ ಸೇವೆ.

ಪ್ರಪಂಚಾದ್ಯಂತ ಇರುವ ಸುಬ್ರಹ್ಮಣ್ಯ ದೇವಸ್ಥಾನಗಳಲೆಲ್ಲಾ ಅದ್ದೂರಿಯಾಗಿ ನಡೆಯುವ ಕಾವಡಿ ಸೇವೆ.

ಸಂಸಾರದ ಭಾರದ ಸಂಕೇತವಾಗಿರುವ ಕಾವಡಿಯನ್ನು ಮುರುಗನಿಗೆ ಹೊತ್ತ ಭಕ್ತರ ಜೀವನದ ಹೊರೆ ಕಡಿಮೆಯಾಗುತ್ತದೆ ಎಂದು ಪ್ರತೀತಿ. ತಾರಕಾಸುರ ಮತ್ತು ಶೂರಪದ್ಮಾಸುರರ ಸಂಹಾರಕ್ಕಾಗಿ ಪಾರ್ವತೀ ಪರಮೇಶ್ವರ ಪುತ್ರನಾಗಿ ಅವತರಿಸಿದ ಕಾರ್ತಿಕೇಯ, ಸರ್ವಜನರ ಸಂಸೇವ್ಯ. ಸುಬ್ರಹ್ಮಣ್ಯನ ಉಪಾಸನೆಯಿಂದ ವಿಶೇಷ ಫಲವು ದೊರೆಯುವುದೆಂಬುದು ಶಾಸ್ತ್ರಗಳ ಉದ್ಗಾರ ಮತ್ತು ಭಕ್ತ ಜನರ ಸಿದ್ಧ ಅನುಭವ. ವಿಶೇಷವಾಗಿ ಪ್ರಾತಃಕಾಲದಲ್ಲಿ ಸುಬ್ರಹ್ಮಣ್ಯ ದೇವಾಲಯಗಳಿಗೆ ಕಾವಡಿಯನ್ನು ಕೊಂಡೊಯ್ಯುವುದು ಅತ್ಯಂತ ಮಂಗಳಕರವೆಂಬ ಪರಿಗಣನೆ.



ಶ್ರೀ ದತ್ತವೇಂಕಟೇಶ್ವರ ದೇವಾಲಯದ ಶುದ್ಧ ಸ್ವಚ್ಛ ಪ್ರಾಂಗಣ. ರಂಗು ರಂಗಿನ ರಂಗೋಲಿ. ಅರಿಶಿನ, ಕುಂಕುಮ, ಹೂಗಳಿಂದ ಅಲಂಕೃತವಾದ ನೂರಾರು ಕಾವಡಿಗಳು. ಸಂಭ್ರಮದಿಂದ ಕಾವಡಿಗಳನ್ನು ಹೊತ್ತು ಆಶ್ರಮದ ದತ್ತ ಪ್ರಾರ್ಥನಾ ಮಂದಿರದತ್ತ ಧಾವಿಸುತ್ತಿರುವ ಭಕ್ತರ ಸಮೂಹ. ನಮ್ಮ ಟಿಕೆಟ್ ತೋರಿಸಿ ಅವರು ಕೊಟ್ಟ ಕಾವಡಿಯನ್ನು ಸ್ವೀಕರಿಸುವಾಗಲೇ ಒಳಗೇನಿದೆಯೆಂದು ನೋಡುವ ಉತ್ಸುಕತೆ. ನಮಗೆ ದೊರೆತದ್ದು ಹಾಲಿನಿಂದ ತುಂಬಿದ ಕಾವಡಿ.

ಧನ್ಯತೆಯ ಭಾವದಿಂದ ಹೊತ್ತು ನಡೆಯುವಾಗ ಸುತ್ತಲೂ ಪುಟ್ಟ ಮಕ್ಕಳಿಂದ ಹಿಡಿದು ವಯೋವೃದ್ಧರವರೆಗೆ ಎಲ್ಲರೂ ಹೆಗಲ ಮೇಲೆ ಬಣ್ಣ ಬಣ್ಣದ ಚಿತ್ತಾರಗಳನ್ನೊಳಗೊಂಡ ಕಾವಡಿಗಳನ್ನು ಹೊತ್ತು ಸಂಭ್ರಮದಿಂದ ನಡೆಯುತ್ತಿರುವ ದೃಶ್ಯ.

ದತ್ತಾತ್ರೇಯ ಪ್ರಾರ್ಥನಾ ಮಂದಿರ. ಬಲಗಡೆ ಗಾಜಿನಲ್ಲಿ ಕಾಣುತ್ತಿರುವ ಅರ್ಕ ಗಣಪತಿಗೆ "ಪ್ರಥಮದಲ್ಲಿ ನಮಿಪೆ ನಿನಗೆ ಅರ್ಕ ಗಣಪತಿ" ಎಂದು ವಂದಿಸಿ, ಮೆಟ್ಟಲಿಳಿದು, ಅಲ್ಲೇ ಪಕ್ಕದಲ್ಲೆ ಮಂದಸ್ಮಿತರಾಗಿ ನಮಗೆ ಆಶೀರ್ವಾದ ಮಾಡುತ್ತಿರುವ ಪೂಜ್ಯ ಸ್ವಾಮೀಜೀಅವರ ಚಿತ್ರ ಮತ್ತು ಅಲ್ಲಿರುವ ಗುರು ಪಾದುಕೆಗಳಿಗೆ ವಂದನೆ.

ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುದೇವೋ ಮಹೇಶ್ವರಃ।
ಗುರುರೇವ ಪರಂ ಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ॥
ಜ್ಞಾನಶಕ್ತಿ ಸಮಾರೂಢಃ ತತ್ತ್ವ ಮಾಲಾ ವಿಭೂಷಿತಃ।
ಭುಕ್ತಿಮುಕ್ತಿ ಪ್ರದಾತಾ ಚ ತಸ್ಮೈ ಶ್ರೀ ಗುರವೇ ನಮಃ॥

ಬ್ರಹ್ಮ ವಿಷ್ಣು ಮಹೇಶ್ವರರ ತ್ರಿಮೂರ್ತಿ ರೂಪ ದತ್ತಾತ್ರೇಯರ ಭವ್ಯ ದರ್ಶನ.

ಆದೌ ಬ್ರಹ್ಮಾ ಹರಿರ್ಮಧ್ಯೇ ಹ್ಯಂತೇ ದೇವಃ ಸದಾಶಿವಃ।
ಮೂರ್ತಿತ್ರಯ ಸ್ವರೂಪಾಯ ದತ್ತಾತ್ರೇಯ ನಮೋಸ್ತುತೇ॥

ಅಲಂಕೃತವಾದ ರಥ. ರಥದಲ್ಲಿ ಧಗಧಗಿಸುವ ಆಭರಣಗಳು, ಕನಕಮಯ ವಸ್ತ್ರ, ಬಣ್ಣ ಬಣ್ಣದ ಗುಲಾಬಿ, ಶಾವಂತಿಗೆ, ಕಣಿಗಲೆ, ಮಲ್ಲಿಗೆಗಳಿಂದ ಶೋಭಿಸುತ್ತಿರುವ ದಿವ್ಯ ಸುಂದರ ಮುಗ್ಧ ಮನೋಹರ ಮೂರ್ತಿ ದಂಡಪಾಣಿ.

ಧ್ಯಾಯೇತ್ಷಣ್ಮುಖಮಿಂದುಕೋಟಿಸದೃಶಂ ರತ್ನಪ್ರಭಾಶೋಭಿತಂ
ಬಾಲಾರ್ಕದ್ಯುತಿಷಟ್ಕಿರೀಟವಿಲಸತ್ಕೇಯೂರಹಾರಾನ್ವಿತಮ್ ।
ಕರ್ಣಾಲಂಬಿತಕುಂಡಲಪ್ರವಿಲಸದ್ಗಂಡಸ್ಥಲಾಶೋಭಿತಂ
ಕಾಂಚೀಕಂಕಣಕಿಂಕಿಣೀರವಯುತಂ ಶೃಂಗಾರಸಾರೋದಯಮ್||
ಧ್ಯಾಯೇದೀಪ್ಸಿತಸಿದ್ಧಿದಂ ಶಿವಸುತಂ ಶ್ರೀದ್ವಾದಶಾಕ್ಷಂ ಗುಹಂ
ಖೇಟಂ ಕುಕ್ಕುಟಮಂಕುಶಂ ಚ ವರದಂ ಪಾಶಂ ಧನುಶ್ಚಕ್ರಕಮ್ ।
ವಜ್ರಂ ಶಕ್ತಿಮಸಿಂ ಚ ಶೂಲಮಭಯಂ ದೋರ್ಭಿರ್ಧೃತಂ ಷಣ್ಮುಖಂ
ದೇವಂ ಚಿತ್ರಮಯೂರವಾಹನಗತಂ ಚಿತ್ರಾಂಬರಾಲಂಕೃತಮ್||

ಮಾತಿಗೂ ಮನಕ್ಕೂ ಮೀರಿದ ಅಗೋಚರವಾದ ಸತ್, ಚಿತ್, ಆನಂದರೂಪವಾದ ಬ್ರಹ್ಮವಸ್ತುವೇ ಶಿಶುಭಾವದಿಂದ ಗೌರೀಹರರನ್ನು ಸೇರಿದ ಸುಬ್ರಹ್ಮಣ್ಯನಿಗೆ ಷೋಡಶೋಪಚಾರ ಪೂಜೆ.

"ಸ್ಕಂದಾಯ ನಮಃ, ಗುಹಾಯ ನಮಃ ..." ಅರ್ಚಕರು ಹೇಳುತ್ತಿರುವ ಸುಬ್ರಹ್ಮಣ್ಯ ದಿವ್ಯ ಅಷ್ಟೋತ್ತರ ಶತನಾಮಾವಳಿಯ ಜೊತೆ ಮನದಲ್ಲೇ ದನಿಗೂಡಿಸಿದ ಆನಂದ, ಶ್ರೀ ಬಾಲಸ್ವಾಮೀಜೀಯವರ ಜೊತೆ.

"ಪರಂ ಬ್ರಹ್ಮೈವಮತನೋದ್ ಬಾಲಭಾವಮುಪಾಗತಮ್" ಪರಬ್ರಹ್ಮ ವಸ್ತುವೇ ಬಾಲರೂಪದಿಂದ ಆವಿರ್ಭವಿಸಿದ ಪುಟ್ಟ ಸುಬ್ರಹ್ಮಣ್ಯ, ಮೇಲೆ ಪ್ರಸ್ಫುಟವಾಗಿ ಪ್ರಕಾಶಿಸುತ್ತಿರುವ ದಂಡ, ಸುತ್ತಲೂ ಧ್ವಜ, ಛತ್ರ ಚಾಮರಗಳಿಂದ ರಂಗು ರಂಗಿನ ಹೂವುಗಳಿಂದ ಅಲಂಕಾರ. ಸುಬ್ರಹ್ಮಣ್ಯ ಆರಾಧಕರಾದ ಪೂಜ್ಯ ಬಾಲ ಸ್ವಾಮೀಜೀ ವೇಲಾಯುಧನಿಗೆ ಪೂಜೆ ಸಲ್ಲಿಸಿ, ರಥದ ಚಕ್ರಗಳ ಮುಂದೆ ನಿಂಬೇಹಣ್ಣುಗಳನ್ನು ಇಟ್ಟು ಪೂಜಿಸಿದ ನಂತರ

"ಹರೋಂ ಹರ, ಹರೋಂ ಹರ, ಹರೋಂ ಹರ, ಹರೋಂ ಹರ"

ಎಂಬ ಭಕ್ತರ ಜಯ ಜಯಕಾರದೊಂದಿಗೆ ರಥಕ್ಕೆ ಚಾಲನೆ. ರಥೋತ್ಸವದೊಂದಿಗೆ ಕಾವಡಿ ಸೇವಾ ಯಾತ್ರೆಯ ಆರಂಭ. ಸುಬ್ರಹ್ಮಣ್ಯನ ರಥ, ಹಿಂದೆ ಕಾವಡಿ ಹೊತ್ತ ಭಕ್ತರ ಸಮೂಹಕ್ಕೆ ಸುವಾಸಿನಿಯರಿಂದ ಆರತಿಯ ಭವ್ಯ ಸ್ವಾಗತ.

"ನಮೋ ಹಿರಣ್ಯಬಾಹವೇ ಸೇನಾನ್ಯೇ...."

ಎಂಬ ಶ್ರುತಿವಾಕ್ಯದಂತೆ ಸರ್ವೇಂದ್ರಿಯಗ್ರಾಮ ಸೇನಾನಿಯಾದ, ಸುವರ್ಣಶಕ್ತಿಧರನಾದ, ಬಾಹ್ಯಾಂತಃ ಶತ್ರುಗಳ ಸಂಹಾರಮೂರ್ತಿಯಾದ ದೇವಸೇನಾಪತಿಯ ಹಿಂದೆ ಸಂಗ್ರಾಮದಲ್ಲಿ ಮಾನಸಿಕ – ದೈಹಿಕ ದೈತ್ಯರ ಜೊತೆ ವೀರಾವೇಶದಿಂದ ಹೋರಾಡಿ ಜೀವನದ ರಣರಂಗದಲ್ಲಿ ವಿಜಯಿಗಳಾದ ಸೈನ್ಯದಂತೆ ನಾವೂ


"ಹರೋಂ ಹರ, ಹರೋಂ ಹರ"

ಎಂದು ಜಯಕಾರ ಮಾಡುತ್ತಾ ಕಾವಡಿ ಹೊತ್ತಿರುವ ಭಕ್ತ ಸಮೂಹದ ಜೊತೆ ಆಂಜನೇಯಸ್ವಾಮಿಗೆ ನಮಸ್ಕರಿಸಿ, ಪೂಜೆ ಸಲ್ಲಿಸಿ, ನಂತರ ದತ್ತ ವೇಂಕಟೇಶ್ವರನ ದೇವಸ್ಥಾನದ ಪ್ರಾಂಗಣಕ್ಕೆ ಬಂದು, ಗಣಪತಿ, ಬಯಲು ಆಂಜನೇಯ, ಈಶ್ವರ, ಸರಸ್ವತಿ, ಲಕ್ಷ್ಮಿ ಎಲ್ಲರಿಗೂ ಪ್ರಾರ್ಥನೆ. ಹಲವಾರು ಭಕ್ತರು ಸಂತಾನ ಭಾಗ್ಯ ಪಡೆದ ನಾಗರ ಪ್ರತಿಷ್ಠೆಯ ಸ್ಥಳಕ್ಕೆ ಬಂದು ನಮ್ಮ

ಕಾವಡಿಗಳ ಸಮರ್ಪಣೆ. ಅರಿಶಿನ ಲೇಪದಿಂದ ಕುಂಕುಮ ಬೊಟ್ಟುಗಳಿಂದ ಕಂಗೊಳಿಸುತ್ತಿರುವ ನಾಗದೇವತೆಗಳಿಗೆ ಪ್ರಣಾಮ.







ತ್ರಾಹಿ ತ್ರಾಹಿ ಮಹಾಭೋಗೀಂ ಸರ್ವೋಪದ್ರವ ದುಃಖಿತಃ ಸಂತತೀಂ ದೇಹಿಮೇ ಪುಣ್ಯಂ
ನಿರ್ದುಷ್ಟಾಮ್ ದೀರ್ಘಜೀವಿತಾಮ್ ಪ್ರಸನ್ನಾಂ ಪಾಹಿಕೃಪಾಳೋ ಭಕ್ತ ದೀನ ವತ್ಸಲಾ॥
ಜಗತ್ಕಾರುರ್ ಜಗದ್ಗೌರೀ ಮಾನಸಾ ಸಿದ್ಧಯೋಗಿನೀ ವೈಷ್ಣವೀ ನಾಗಭಗಿನೀ
ಶೈವೀ ನಾಗೇಶ್ವರೀ ತಥಾ ಜಗತ್ಕಾರಂ ಪ್ರಿಯಾಸ್ತೀತ ಮಾತಾ
ವಿಷಹರೀತಚ ಮಹಾಜ್ಞಾನಯುತಾಚೈವ ಸಾ ದೇವೀ ವಿಶ್ವಪೂಜಿತಾ॥
ದ್ವಾದಶೈತಾನಿ ನಾಮಾನಿ ಪೂಜಾಕಾಲೇತು ಯಃ ಪಠೇತ್।
ತಸ್ಯ ನಾಗಭಯಂ ನಾಸ್ತಿ ವಂಶೋದ್ಭವಸ್ಯಚ॥

ಮರಕತ ಸುಬ್ರಹ್ಮಣ್ಯನ ದೇಗುಲದ ಮುಂದೆ ಅರಿಶಿನ ಕುಂಕುಮ ಲೇಪವಾಗಿರುವ ಪವಿತ್ರ ಔದುಂಬರ ವೃಕ್ಷದ ಕೆಳಗೆ ದತ್ತಾತ್ರೇಯರ ಭವ್ಯ ಬಂಡೆಯ ಬಳಿ, ಶ್ರೀವರಾಹಸ್ವಾಮಿಯ ಮುಂದೆ ಆಸೀನ. ಎದುರಲ್ಲೇ ಸುಬ್ರಹ್ಮಣ್ಯ ದೇಗುಲದ ದ್ವಾರ.







ಓಂ ತತ್ಪುರುಷಾಯ ವಿದ್ಮಹೇ ಮಹಾಸೇನಾಯ ಧೀಮಹಿ ತನ್ನೋ ಷಣ್ಮುಖ ಪ್ರಚೋದಯಾತ್॥

ಅರ್ಧಕಾಯಂ ಮಹಾವೀರಂ ಚಂದ್ರಾದಿತ್ಯ ವಿಮರ್ದನಂ।

ಸಿಂಹಿಕಾ ಗರ್ಭಸಂಭೂತಂ ತಂ ರಾಹುಮ್ ಪ್ರಣಮಾಮ್ಯಹಮ್॥

ಫಲಾಶಪುಷ್ಪಸಂಕಾಶಂ ತಾರಕಾಗ್ರಹ ಮಸ್ತಕಮ್।

ರೌದ್ರಮ್ ರೌದ್ರಾಂತಕಃ ಘೋರಂ ತಂ ಕೇತುಂ ಪ್ರಣಮಾಮ್ಯಹಮ್॥

ಸರ್ವಬ್ರಹ್ಮಾಂಡ ನಾಥಸ್ತ್ವಂ ಅತಸ್ತೇ ಶರಣಂ ಗತಃ।

ಶೃಣುಸ್ವಾಮಿನ್ ವಚೋಮೇದ್ಯ ಕಷ್ಟಂ ಮೇ ವಿನಿವಾರಯಃ॥

ವೇದಘೋಷ. ಅಭಿಷೇಕ ಪ್ರಾರಂಭ.

"ಅನಾದ್ಯೋಃ ದಂಪತ್ಯೋಃ ಸುಕೃತಮಿವ ಮೂರ್ತಂ ನಯನಯೋಃ"

ಅನಾದಿ ದಂಪತಿಗಳಾದ ಪಾರ್ವತೀ ಪರಮೇಶ್ವರರ ಸುಕೃತವೇ ಮೂರ್ತೀಭವಿಸಿದಂತೆ ಸ್ವಾಮಿ ಪ್ರತ್ಯಕ್ಷ.

ಶಿವತೇಜ, ಗಿರಿಜಾತ್ಮಜ, ಸ್ಕಂದ, ಅಗ್ನಿಗರ್ಭ, ಗಾಂಗೇಯ, ಶರವಣಭವ, ಕಾರ್ತಿಕೇಯ, ಷಣ್ಮುಖ ಮುಂತಾದ ನಾಮಧೇಯ ಸರಣಿ ಮತ್ತು ಕುಮಾರಸಂಭವದ ಅದ್ಭುತ ಚರಿತ್ರೆಯ ಮನೋವೀಕ್ಷಣೆ. ಸಾಕ್ಷಾತ್ ದೇವನದಿ ಗಂಗೆಯೇ ತನ್ನ ತನಯ ಗಾಂಗೇಯನಿಗೆ ಸ್ನಾನ ಮಾಡಿಸುತ್ತಾ ಇದ್ದಾಳೆ ಎನ್ನುವಂತೆ ಜಲಾಭಿಷೇಕ. ನಮ್ಮ ಜನ್ಮ ಜನ್ಮಾಂತರ ಪಾಪಗಳನ್ನೆಲ್ಲಾ ಸರ್ವತೀರ್ಥನಾಯಕನಾದ ಗಾಂಗೇಯ ನಾಶಗೊಳಿಸುತ್ತಿರುವ ಪವಿತ್ರ ಅನುಭವ. ಕ್ಷೀರಸಾಗರಶಯನ ಹರಿಯು ತನ್ನ ದೇವಸೇನಾನಿಗೆ ದೈತ್ಯರ ಕಾಳಗದ ಆಯಾಸವನ್ನು ಪರಿಹರಿಸಲು ಕ್ಷೀರದಲ್ಲೇ ಅಭಿಷೇಕ ಮಾಡುತ್ತಿದ್ದಾನೋ ಎಂಬಂತೆ ಕ್ಷೀರಾಭಿಷೇಕ. ದುರಾಸೆ ಎಂಬ ವಿಷಯ ಸಮುದ್ರದಲ್ಲಿ ಮುಳುಗಿರುವ ನಮ್ಮನ್ನು ದಡ ಸೇರಿಸೆಂಬ ಪ್ರಾರ್ಥನೆ.

ಅಗ್ನಿಜನ್ಯನು ಅಗ್ನಿಹೋತ್ರದಲ್ಲಿದ್ದಾಗಿನ ತಾಪವನ್ನು ಪರಿಹರಿಸಲಿಕ್ಕೇನೋ ಎನ್ನುವಂತೆ ದಧ್ಯಾಭಿಷೇಕ. ಗಟ್ಟಿಯಾದ ಮೊಸರು ಪುಟ್ಟ ಸುಬ್ರಹ್ಮಣ್ಯನ ಕೆನ್ನೆ, ಗಲ್ಲ, ಭುಜಗಳ ಮಧ್ಯೆ ಅಲ್ಲಲ್ಲೇ ನಿಂತು ಸ್ಕಂದನನ್ನು ಬಿಡಲಾಗದೇ ಬಿಡಲಾಗದೇ ಜಾರುತ್ತಿದ್ದಾಗ ನಮಗೂ ಪರಂಧಾಮನ ಸಾನಿಧ್ಯಸಂಪತ್ತಿನ ದಿವ್ಯಾನುಭೂತಿ.

"ಮಧು ಮನಿಷ್ಯೇ ಮಧು ಜನಿಷ್ಯೇ ಮಧು ವಕ್ಷ್ಯಾಮಿ ಮಧು ವದಿಷ್ಯಾಮಿ"

ಸ್ವಾಮಿಗೆ ಜೇನುತುಪ್ಪದ ಅಭಿಷೇಕ, ತುಪ್ಪದ ಅಭಿಷೇಕ, ದುಷ್ಟಶಕ್ತಿ ಹಾಗೂ ಋಣಾತ್ಮಕ ಶಕ್ತಿಗಳಿಂದ ರಕ್ಷಣೆ.

ಕ್ಷೀರೇಣ ಕ್ಷೀಯತೇ ಪಾಪಂ। ದಧ್ಯಾ ಧನ ವಿವರ್ಧನಮ್।

ಅಜ್ಯೇ ಸಾಯುಷ್ಯಮಾಪ್ನೋತಿ। ಮಧುನಾ ಹಂತಿ ಕಿಲ್ಬಿಷಂ।

ಸುಖಿ ಶರ್ಕರಂ ವಿಂದ್ಯಾತ್। ಪಂಚಾಮೃತ ಫಲಂ ಸ್ಮೃತಮ್।

ಪಂಚಾಮೃತೇನ ಸಂಸ್ನಾಪ್ಯ ಪಂಚಪಾತಕ ನಾಶನಮ್॥

ಲೋಕದ ಹಿತಾರ್ಥವಾಗಿ ಸ್ಖಲಿತವಾದ ಶಿವನ ತೇಜಸ್ಸು, ಪರ್ವತಾರಣ್ಯ ಸಹಿತವಾದ ಸಮಸ್ತ ಪೃಥ್ವಿಯನ್ನು ವ್ಯಾಪಿಸಿದ್ದನ್ನು ಸಾಕ್ಷಾತ್ಕರಿಸುತ್ತಾ ಪರಮಾತ್ಮನ ಆರಾಧನೆಯಲ್ಲಿರುವ

ಮಹಾನ್ ಶಕ್ತಿಯನ್ನು ಅಭಿವ್ಯಕ್ತಿಸುವಂಥಾ ವಿಭೂತಿಯ ಅಭಿಷೇಕ. ತನ್ನ ತಪಸ್ಸಿಗೆ ಸರ್ವರೂಪ ಸರಿಯೆನಿಸಿ, ವಲ್ಮೀಕದಲ್ಲಿ ವಾಸಿಸಿ, ಬೃಹತ್ತಾದ ಬ್ರಹ್ಮನನ್ನು ಸತತ ಚಿಂತಿಸಿ,

"ಸುಬ್ರಹ್ಮಣ್ಯ" ನೆನಿಸಿಕೊಂಡ ಶಿವಪುತ್ರನಿಗೆ ಮೃತ್ತಿಕೆ ಲೇಪನ. ಶರವಣಭವನಿಗೆ ಪಳನಿಯ ಪಂಚಾಮೃತ ಲೇಪನ. ಅಭಿಷೇಕಾನಂತರ ಶಿವತೇಜಸ್ಸು ಹಿಮವತ್ಪರ್ವತದ ಮೇಲೆ ಜಾರಿದಾಗ ಪ್ರತಿಫಲಿಸಿದ ಬಂಗಾರದ ವರ್ಣ ಶಿವತೇಜನ ಮುಖಾರವಿಂದದಲ್ಲಿ. ವಿವಿಧ ಸುವಾಸನಾ ಪುಷ್ಪಗಳಿಂದ ಶಕ್ತಿವದನ, ಮಯೂರವಾಹನ ದೇವಸೇನನಿಗೆ ಪುಷ್ಪಾಂಜಲಿ, ಮಂಗಳಾರತಿ.

ಶಿವಯೋಸ್ತನುಜಾಯಾಸ್ತು ಶ್ರಿತಮಂದಾರಶಾಖಿನೇ।
ಶಿಖಿವರ್ಯತುರಂಗಾಯ ಸುಬ್ರಹ್ಮಣ್ಯಾಯ ಮಂಗಳಮ್॥
ಭಕ್ತಾಭೀಷ್ಟಪ್ರದಾಯಾಸ್ತು ಭವರೋಗವಿನಾಶಿನೇ।
ರಾಜಾಧಿರಾಜವಂದ್ಯಾಯ ರಣಧೀರಾಯ ಮಂಗಳಮ್॥
ಶೂರಪದ್ಮಾದಿ ದೈತೇಯ ತಮಿಸ್ರಕುಲಭಾನವೇ।
ತಾರಕಾಸುರಕಾಲಾಯ ಬಾಲಕಾಯಾಸ್ತು ಮಂಗಳಮ್॥
ವಲ್ಲೀವದನರಾಜೀವ ಮಧುಪಾಯ ಮಹಾತ್ಮನೇ।
ಉಲ್ಲಸನ್ಮಣಿ ಕೋಟೀರ ಭಾಸ್ಕರಾಯಾಸ್ತು ಮಂಗಳಮ್॥
ಕಂದರ್ಪಕೋಟಿ ಲಾವಣ್ಯನಿಧಯೇ ಕಾಮದಾಯಿನೇ।
ಕುಲಿಕಾಯುಧಹಸ್ತಾಯ ಕುಮಾರಾಯಾಸ್ತು ಮಂಗಳಮ್॥
ಮುಕ್ತಾಹಾರಲಸತ್ಕಂಠ ರಾಜಯೇ ಮುಕ್ತಿದಾಯಿನೇ।
ದೇವಸೇನಾಸಮೇತಾಯ ದೈವತಾಯಾಸ್ತು ಮಂಗಳಮ್॥
ಕನಕಾಂಬರ ಸಂಶೋಭಿ ಕಟಯೇ ಕಲಿಹಾರಿಣೇ।
ಕಮಲಾಪತಿವಂದ್ಯಾಯ ಕಾರ್ತಿಕೇಯಾಯ ಮಂಗಳಮ್॥
ಶರಕಾನನಜಾತಾಯ ಶೂರಾಯ ಶುಭದಾಯಿನೇ।
ಶೀತಭಾನು ಸಮಾಶ್ರಾಯ ಶರಣ್ಯಾಯಾಸ್ತು ಮಂಗಳಮ್॥

ನೋಡಲಿ ಸ್ಕಂದನ ಮೂರ್ತಿಯ, ಕೇಳಲಿ ಸ್ಕಂದನ ಕೀರ್ತಿಯ, ನುಡಿಯಲಿ ಸ್ಕಂದನ ಮಹಿಮೆಯ, ಅರ್ಚಿಸಲಿ ಕರಗಳು ಸ್ಕಂದನ, ಸೇವಿಸಲಿ ಶರೀರವು ಸ್ಕಂದನ, ನನ್ನೆಲ್ಲ ಭಾವನೆಗಳು ಗುಹನಲ್ಲಿ ನೆಲೆಸಲಿ.

ದೃಶಿ ಸ್ಕಂದಮೂರ್ತಿಃ ಶ್ರುತೌ ಸ್ಕಂದಕೀರ್ತಿಃ। ಮುಖೇ ಮೇ ಪವಿತ್ರಂ ಸದಾ ತಚ್ಚರಿತ್ರಮ್।
ಕರೇ ತಸ್ಯ ಕೃತ್ಯಂ ವಪುಸ್ತಸ್ಯ ಭೃತ್ಯಂ। ಗುಹೇ ಸಂತು ಲೀನಾ ಮಮಾಶೇಷಭಾವಾಃ॥
ಸ್ಥಿರಾಂ ದೇಹಿ ಭಕ್ತಿಂ ಭವತ್ಪಾದಪದ್ಮೇ। ಶ್ರಿಯಂ ನಿಶ್ಚಲಾಂ ದೇಹಿ ಮಹ್ಯಂ ಕುಮಾರ।
ಸುತಂ ಚಂದ್ರತಾರಂ ಸುವಂಶಾಭಿವೃದ್ಧಿಂ। ಕುರುತ್ವಂ ಪ್ರಭೋಮೇ ಮನಃ ಕಲ್ಪಸಾಲಃ॥
ನಮಸ್ತೇ ನಮಸ್ತೇ ಮಹಾಶಕ್ತಿಪಾಣೇ। ನಮಸ್ತೇ ನಮಸ್ತೇ ಲಸದ್ವಜ್ರಪಾಣೇ।
ನಮಸ್ತೇ ನಮಸ್ತೇ ಕಟಿನ್ಯಸ್ತ ಪಾಣೇ। ನಮಸ್ತೇ ನಮಸ್ತೇ ಸದಾಭೀಷ್ಟ ಪಾಣೇ॥
ನಮಸ್ತೇ ನಮಸ್ತೇ ಮಹಾಶಕ್ತಿಧಾರಿನ್। ನಮಸ್ತೇ ಸುರಾಣಾಂ ಮಹಾಸೌಖ್ಯದಾಯಿನ್।
ನಮಸ್ತೇ ಸದಾ ಕುಕ್ಕುಟೇಶಾಂಕಕೇತೋ। ಸಮಸ್ತಾಪರಾಧಂ ವಿಭೋ ಮೇ ಕ್ಷಮಸ್ವ॥

“ ಶ್ರೀ ಸುಬ್ರಹ್ಮಣ್ಯಾರ್ಪಣಮಸ್ತು”

